# ಆಹಾ ಸುದ್ದಿ!

★ ಸಸಿತೋಟ



ಶಸ್ತ್ರಚಿಕಿತ್ಸೆ ನಡೆಸುವಾಗ ವೈದ್ಯರು ಸಂಗೀತವನ್ನು ಆಲಿಸುವುದು ಮಾಮೂಲು. ಆದರೆ ಅಮೆರಿಕಾದಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ರೋಗಿಯೇ ಈ ಸಂಗೀತವನ್ನು ಒದಗಿಸಿದ್ದಾನೆ. ಗಿಟಾರ್ ವಾದಕ ಬ್ರ್ಯಾಡ್ ಕಾರ್ಟರ್‌ಗೆ ಕೈ ನಡುಕ ಶುರುವಾಗಿ ತಲೆಯ ಶಸ್ತ್ರಚಿಕಿತ್ಸೆಗೆ ಒಳಗಾದ. ಆದರೆ ಈ ಸಂದರ್ಭದಲ್ಲಿ ಆತ ಎಚ್ಚರವಾಗಿರಬೇಕಾಗಿತ್ತು. ಎಚ್ಚರವಾಗಿರಲು ಗಿಟಾರ್ ನುಡಿಸಲೇಬೇಕಾದ ದರ್ದು ಆತನಿಗಿತ್ತು. ದಾಖಲೆ ಆಗುವುದೆಂದರೆ ಹೀಗೆ, ಬೇಡವೆಂದರೂ ಆಗಿಬಿಡುತ್ತದೆ.

ಟರ್ಕಿ ರಾಜಧಾನಿ ಇಸ್ತಾಂಬುಲ್‌ನಲ್ಲಿ ಇತ್ತೀಚೆಗೆ ಸರ್ಕಾರದ ವಿರುದ್ಧ ಪ್ರತಿಭಟನಾಕಾರರು ರಾತ್ರಿ- ಹಗಲೆನ್ನದೆ ಪ್ರತಿಭಟನೆ ನಡೆಸಿದರು. ಹಗಲು ತಾತ್ಕಾಲಿಕ ಗ್ರಂಥಾಲಯ ತೆರೆದು ಓದಿದರು. ರಾತ್ರಿ ಯೋಗಕ್ಕೆ ಮೊರೆ ಹೋದರು. ಪ್ರತಿಭಟನೆ ಯಾವಾಗ ಮಾಡಿದರೋ? ಆದರೆ ಯೋಗದಿಂದ ಪ್ರತಿಭಟನೆಯ ಕಾವು ಕಡಿಮೆಯಾಗಿದ್ದಂತೂ ಹೌದು. ಹೀಗಾಗಿ ದೇಶದ ಜನರಿಗೆ ಯೋಗ ಕಲಿಸಲು ಯೋಗ ಗುರುಗಳನ್ನು ಭಾರತದಿಂದ ಆಮದು ಮಾಡಿಕೊಳ್ಳಲು ಟರ್ಕಿ ಸರ್ಕಾರ ಆಲೋಚನೆ ಮಾಡುತ್ತಿದೆಯೇ ಎಂಬುದು ಗೊತ್ತಾಗಿಲ್ಲ.



ಉಪಾಹಾರಗೃಹಗಳಿಗೆ ಗಿರಾಕಿಗಳನ್ನು ಸೆಳೆಯಲು ಏನೆಲ್ಲಾ ಕಸರತ್ತುಗಳು ನಡೆಯುತ್ತಿವೆ. ಆಕರ್ಷಕ ಯುವತಿಯರಿಗೆ ಇನ್ನೂ ಆಕರ್ಷಕವಾದ ಉಡುಗೆ ತೊಡಿಸಿಯಾಯಿತು. ಬೆಕ್ಕು, ನಾಯಿಗಳನ್ನು ಬಿಡಲಾಯಿತು. ಈಗ ಟೋಕಿಯೋದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಗಿರಾಕಿಗಳ ಜೊತೆ ಆಡಲು ಆಡುಗಳನ್ನು ಕೆಫೆಯೊಂದರಲ್ಲಿ ಬಿಡಲಾಗಿದೆ. ಗಿರಾಕಿಗಳೇನೋ ಖುಷಿಯಿಂದ ಆಡಿನ ಜೊತೆ ಹಾಡಿ, ಆಡಿ, ವಾಕ್ ಕೂಡಾ ಹೋಗಬಹುದು. ಆದರೆ ಕಾಫಿ ಸರ್ವ್ ಮಾಡುವ ಕೆಲಸದ ಮಧ್ಯೆ ಆಡುಗಳ ಹಿಕ್ಕೆಯನ್ನು ಸ್ವಚ್ಛ ಮಾಡುವ ಕೆಲಸ ಪರಿಚಾರಕರಿಗೆ. ಹಾಗೇ ಹಿಕ್ಕೆ ವಾಸನೆ ಬರದಂತೆ ಆಡುಗಳಿಗೆ ವಿಶೇಷ ಪ್ರೊಟೀನ್‌ಯುಕ್ತ ಗುಳಿಗೆ ತಿನ್ನಿಸಬೇಕಂತೆ. ಇಷ್ಟೆಲ್ಲಾ ಬೇಕಿತ್ತಾ ಎಂದು ಮಾಲಕಿ ಕವಾಗುಶಿಯನ್ನು ಕೇಳಿದರೆ, ಆನೆ ಕೆಫೆ ಮಾಡುವ ಆಸೆ ಇದೆ ಎಂದಳಂತೆ!

ಅಮೆರಿಕಾದ ಬಾಸ್ಟನ್ನಿನ ಹೈಸ್ಕೂಲುಗಳಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಕಾಂಡೋಮ್‌ಗಳನ್ನು ಹಂಚಲು ಶಾಲಾ ಆಡಳಿತ ಮಂಡಳಿಯೇ ಒಪ್ಪಿಗೆ ನೀಡಿದೆಯಂತೆ. ಅಲ್ಲಿಯ ಕೆಲವು ಶಾಲೆಗಳಲ್ಲಿ ಇದನ್ನು ಈಗಾಗಲೇ ಹಂಚಲಾಗುತ್ತಿದ್ದು, ಉಳಿದ ಶಾಲೆಗಳಿಗೂ ಸೌಲಭ್ಯ ವಿಸ್ತರಿಸಲಾಗಿದೆಯಂತೆ. ಪಾಲಕರಿಗೆ ಆತಂಕವಾಗಿರುವುದು ಅದಕ್ಕಲ್ಲ, ಈ ಸೌಲಭ್ಯವನ್ನು ಪ್ರಾಥಮಿಕ ಶಾಲಾ ಮಕ್ಕಳೂ ಕೇಳಿದರೆ...!



ದಕ್ಷಿಣ ಜರ್ಮನಿಯ ಕಾರ್ಲ್‌ಸುಹ್ರ್‌ನಲ್ಲಿ ಇತ್ತೀಚೆಗೆ ರಂಗಿನ ಪುಡಿ ಎರಚುವ ಹಬ್ಬ ನಡೆಯಿತು. ನಮ್ಮಲ್ಲೂ ಹೋಳಿ ಹಬ್ಬ ಇದೆಯಲ್ಲ, ಅದರಲ್ಲೇನು ವಿಶೇಷ ಎಂದಿರಾ? ಈ ಹಬ್ಬವನ್ನು ಭಾರತದಿಂದಲೇ ಆಮದು ಮಾಡಿಕೊಂಡಿದ್ದಾರಂತೆ. ಜರ್ಮನಿಯ ಜನ 'ಹೋಲಿ.. ಹೋಲಿ..' ಎಂದು ಹಾಡಿಕೊಂಡು ಹೋಳಿ ಆಡಿದರು. ಹಬ್ಬದ ಜೊತೆ ರಂಗಿನ ಪುಡಿಯೂ ಆಮದಾಗಿದ್ದರೆ, ಉದ್ಯಮದ ವಿಸ್ತರಣೆಯಲ್ಲಿ ಹಳ್ಳಿಯ ಜಾಣೆಯೂ ಸೇರಿಕೊಂಡ ಹಾಗಾಗುತ್ತದೆ.



ಅಮೆರಿಕಾದ ಸಂಗೀತದ ಕಂಪೋಸರ್ ಜೋಸೆಫ್ ಬೆರ್ಟೋಲೋಜ್ಜಿ ಇತ್ತೀಚೆಗೆ ಫ್ರಾನ್ಸ್‌ನ ಐಫೆಲ್ ಗೋಪುರವನ್ನು ಒಂದೇ ಸಮನೆ ಕುಟ್ಟುವ ಕೆಲಸ ನಡೆಸಿದ. ಕಂಪೋಸರ್ ಯಾವಾಗ ಎಂಜಿನಿಯರ್ ಆದ ಎಂದು ಜನ ಬೆರಗಿನಿಂದ ನೋಡಿದರು. ಜೋಸೆಫ್‌ನ ಶಿಷ್ಯರು ಆ ಶಬ್ದಗಳನ್ನೆಲ್ಲ ರೆಕಾರ್ಡ್ ಮಾಡಿಕೊಂಡರು. ಆ ಶಬ್ದಗಳನ್ನೆಲ್ಲ ಸೇರಿಸಿ 'ಟವರ್ ಮ್ಯೂಸಿಕ್' ಹೆಸರಲ್ಲಿ ಆಲ್ಬಂ ತರಲಿದ್ದಾನಂತೆ ಬುದ್ಧಿವಂತ ಜೋಸೆಫ್. ಸಂಗೀತ ವಾದ್ಯಗಳಿಗೆ ಲಕ್ಷಾಂತರ ಡಾಲರ್ ಸುರಿಯುವ ಬದಲು ಕೆಲವೇ ಡಾಲರ್‌ಗೆ ಸಿಗುವ ಸುತ್ತಿಗೆಯಲ್ಲಿ ಎಲ್ಲಾ ಕೆಲಸ ಮುಗಿಸಿದ್ದಾನೆ.